ಈಗ ಒಂದು ಸೂನೆ ಬಂದಿದೆ ಮಾನ್ಯ ಸದಸ್ಯರಾದ ಪಂಪಾಪತಿಯವರು ಈ ಸಭೆಯ ಕಾರ್ಯಕಲಾಪ ಗಳನ್ನು ಇನ್ನು ಮೇಲೆ ಕನ್ನಡದಲ್ಲಿಯೇ ಆಗಬೇಕೆಂದು ತಿಳಿಸಿದ್ದಾರೆ ಅದನ್ನು ಕಾರ್ಯರೂಪಕ್ಕೆ ತರುವುದಕ್ಕೆ ಪ್ರಯತ್ನ ಪಡುತ್ತೇನೆ. ಅಲ್ಲದೆ (1) ಮಾನ್ಯ ಭಾಸ್ಕರಶೆಟ್ಟಿಯವರನ್ನು ಸರ್ಕಾರಿ ಮುಖ್ಯ ಸಚೇತಕ ರನ್ನಾಗಿ ಸರ್ಕಾರ ನೇಮಕ ಮಾಡಲಾಗಿದೆ. (2) ಬಿಸಿನೆಸ್ ಅಡ್ವೈಸರಿ ಕಮಿಟಿಯವರು ಈ ಸಭೆಯನ್ನು 7ನೇ ತಾರೀಖಿನ ಮೇಲೆ ಮುಂದೂಡಬೇಕೆಂದು ತೀರ್ಮಾನ ತೆಗೆದುಕೊಂಡಿದ್ದಾರೆ ಅದು ಇಂಗ್ಲೀಷ್ ಭಾಷೆ ಯಲ್ಲಿದೆ ತಮ್ಮ ಅಪ್ಪಣೆ ಪಡೆದು ಆಂಗ್ಲ ಭಾಷೆಯಲ್ಲಿ ಓದುತ್ತೇನೆ.

ANNOUCEMENT

The Business Advisory Committee which met Yesterday have recommended that the House may take up discussion on the Motion of Thanks to the Governor's Address from Saturday, the 31st January to Friday, the 6th February 1981 including reply by the Government. The Committee have also recommended that the House may take up certain urgent bills on Saturday, the 7th February 1981 and adjourn on 7th to meet in the first week of March. ಇಷ್ಟು ಹೇಳುತ್ತಾ ಬಿಸಿನೆಸ್ ಅಡ್ವೈಸರಿ ಕಮಿಟಿಯವರ ತೀರ್ಮಾನಕ್ಕೆ ಬದ್ಧರಾಗಿ ನಡೆಸಿಕೊಂಡು ಹೋಗಲು ಪ್ರಯತ್ನ ಮಾಡಬೇಕೆಂದು ಕೇಳಿ ಕೊಂಡು ನನ್ನ ಮಾತನ್ನು ಮುಗಿಸುತ್ತೇನೆ.

ಈಗ ಈ ಸಭೆಯು ಇವತ್ತಿನ ಕಾರ್ಯಕಲಾಪಗಳನ್ನು ಮುಗಿಸಿ ಮೇಲಕ್ಕೆದ್ದು ನಾಳೆ ಪುನಃ ಬೆಳಿಗ್ಗೆ ೯ ಗಂಟೆಗೆ ಸೇರುತ್ತದೆ.

The House adjourned at Sixteen minutes past three of the Clock to meet again at Nine of the Clock on Saturday the 31st January 1981.